ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಕೆ. ಎಸ್. ಎಸ್. ಐ. ಡಿ. ಸಿ/ಕೆ. ಐ. ಎ. ಡಿ. ಬಿ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಹಾತುಗಳ ಕುರಿತು

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) –

706 (851) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೆ. ಎಸ್. ಎಸ್. ಐ. ಡಿ. ಸಿ./ಕೆ. ಐ. ಎ. ಡಿ. ಬಿ. ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಹಾತು/ಪ್ರದೇಶಗಳಲ್ಲಿ ನಿವೇಶನಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿ.ಪಿ.82, ಸಿ.ಎಸ್.ಸಿ.2016, ದಿನಾಂಕ: 05.05.2016ರ ಪ್ರಕಾರ ಹಿಂದುಳಿದ ವರ್ಗ, ವರ್ಗ-1, ಪ್ರವರ್ಗ 2ಎ ರವರಿಗೆ ಶೇ. 10%ರ ಮೀಸಲಾತಿ ಪ್ರಕಾರ ಹಂಚಿಕೆ ಮಾಡಲಾಗಿದೆಯೇ;

(ಆ) ಹಂಚಿಕೆ ಮಾಡಿದ್ದಲ್ಲಿ ಒಟ್ಟು ಉದ್ದಿಮೆದಾರರ ಸಂಖ್ಯೆ ಎಷ್ಟು; (ಜಿಲ್ಲಾವಾರು, ವರ್ಗವಾರು ವಿವರಗಳನ್ನು ನೀಡುವುದು)

(ಇ) ಹಂಚಿಕೆ ಮಾಡದಿದ್ದಲ್ಲಿ, ಕಾರಣಗಳನ್ನು ನೀಡುವುದು;

(ಈ) ಈ ಆದೇಶದಲ್ಲಿ ತಿಳಿಸಿರುವಂತೆ ಈ ವರ್ಗದ ಉದ್ದಿಮೆದಾರರಿಗೆ ನಿವೇಶನ/ಶೆಡ್‌ಗಳ ಮೊತ್ತವನ್ನು 6 ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆಯೇ;

(ಉ) ಕಲ್ಪಿಸಿದ್ದಲ್ಲಿ, ರಾಜ್ಯದಲ್ಲಿ ಇದರ ಲಾಭ ಪಡೆದ ಉದ್ದಿಮೆದಾರರ ಸಂಖ್ಯೆ ಎಷ್ಟು?